UASB Library
Newspaper Clippings
Thursday 02 -06-2022 Pg .1
Jai Kisan

# ಎರಡು ವರ್ಷಗಳ ಕೃಷಿ ಡಿಪ್ಲೊಮಾಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕೃಷಿ ವಿಶ್ವವಿದ್ಯಾಲಯದ ಮಹಾವಿದ್ಯಾಲಯಗಳಲ್ಲಿ 2 ವರ್ಷಗಳ ಕೃಷಿ ಮತ್ತು ರೇಷ್ಮೆಕೃಷಿ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 2022-23ನೇ ಸಾಲಿನಲ್ಲಿ ಬೆಂ. ಕೃಷಿ ಮಹಾವಿದ್ಯಾಲಯ, ಮಂಡ್ಯದ ವಿ.ಸಿ. ಫಾರಂ ಮತ್ತು ಚಿಂತಾಮಣಿಯ ರೇಷ್ಮೆಕೃಷಿ ಮಹಾವಿದ್ಯಾಲಯಗಳಿಂದ ಅರ್ಜಿ ಕರೆಯಲಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಸಾಮಾನ್ಯ ವರ್ಗ ಶೇ.45 ಹಾಗೂ ಪ.ಜಾತಿ/ಪಂಗಡ, ಪ್ರವರ್ಗ-1ರ ಅಭ್ಯರ್ಥಿಗಳು ಶೇ.40 ಅಂಕ ಪಡೆದಿದ್ದು, ಏ.2022ಕ್ಕೆ 19 ವರ್ಷ ಪೂರ್ಣಗೊಳ್ಳದವರು ಅರ್ಜಿ ಸಲ್ಲಿಸಬಹುದು. ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50 ಮೀಸಲಾತಿ ಇದೆ. ಸಾಮಾನ್ಯ ವರ್ಗ 500 ರೂ. ಹಾಗೂ ಪ.ಜಾತಿ/ಪಂಗಡ, ಪ್ರವರ್ಗ-1ರ ಅಭ್ಯರ್ಥಿಗಳು 250 ರೂ.ಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಡಿ.ಡಿಯನ್ನು Comptroller, UAS, GKVK, Bangalore-& 560065 ಹೆಸರಿನಲ್ಲಿ ಪಡೆದ ಅರ್ಜಿಗಳನ್ನು ಭರ್ತಿಮಾಡಿ ಜು.1ರ ಒಳಗಾಗಿ ಕುಲಸಚಿವರು, ಕೃಷಿ ವಿವಿ, ಜಿಕೆವಿಕೆ, ಬೆಂಗಳೂರು-65 ಅವರಿಗೆ ಜು.2ರೊಳಗೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದು. ಮಾಹಿತಿಗಾಗಿ www.uasbangalore.edu.in ಅಥವಾ 080-23330149ಕ್ಕೆ ಸಂಪರ್ಕಿಸಿ.

02-06-2022 Vv Pg 06

# ರೇಷ್ಮೆ ಕೃಷಿ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಂಡ್ಯ ವಿ.ಸಿ. ಫಾರಂ ಹಾಗೂ ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯದಲ್ಲಿ 2022-23ನೇ ಸಾಲಿನ ಎರಡು ವರ್ಷಗಳ ಡಿಪ್ಲೊಮಾ ಕೃಷಿ ಮತ್ತು ರೇಷ್ಮೆ ಕೃಷಿ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸ್ವೀಕಾರ ಗುರುವಾರದಿಂದ ಆರಂಭಗೊಳ್ಳಲಿದ್ದು, ಜುಲೈ 1 ಸಲ್ಲಿಕೆಗೆ ಕೊನೆಯ ದಿನ. ಎಸ್ಸೆಸ್ಸೆಲ್ಸಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಶೇ. 45 ಅಂಕ ಗಳಿಸಿದ 19 ವರ್ಷ ಮೀರಿರದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ರೈತರು ಮತ್ತು ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ. 50ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡ/ ಪ್ರವರ್ಗ- 1ಕ್ಕೆ ಸೇರಿದ ವಿದ್ಯಾರ್ಥಿಗಳು ಶೇ. 40ರಷ್ಟು ಅಂಕ ಗಳಿಸಿರಬೇಕು. 500 ರೂ. (ಪರಿಶಿಷ್ಟ ಜಾತಿ ಮತ್ತು ಪಂಗಡ, ಪ್ರವರ್ಗ-1ಕ್ಕೆ ಸೇರಿದವರಿಗೆ 250 ರೂ.) ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ comptroller, UAS, GKVK, Bangalore- 560065 ಹೆಸರಿನಲ್ಲಿ ಡಿಡಿ ಪಡೆದು, ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು- 560065. ಇಲ್ಲಿಗೆ ಕಳುಹಿಸಬೇಕು. ಅರ್ಜಿಯನ್ನು www.uasbangalore.edu.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾಹಿತಿಗೆ 080- 23330149 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

02-06-2022 Vsv Pg 03

# ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕೃಷಿ ವಿಶ್ವವಿದ್ಯಾಲಯವು 2022-23 ನೇ ಸಾಲಿನ ಎರಡು ವರ್ಷಗಳ ಡಿಪ್ಲೊಮಾ (ಕೃಷಿ) ಮತ್ತು ಡಿಪ್ಲೊಮಾ (ರೇಷ್ಮೆ ಕೃಷಿ) ಕೋರ್ಸ್‌ಗಳಿಗೆ ಜೂ.2 ರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ಪಠ್ಯವನ್ನು ಭಾಷೆಯಾಗಿ ಅಭ್ಯಸಿಸಿ ಕನಿಷ್ಠ ಶೇ.45 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು (ಪ.ಜಾ./ಪ.ಪಂ./ಪ್ರವರ್ಗ-I ನವರು ಕನಿಷ್ಠ ಶೇ.40 ಅಂಕಗಳು). ಏಪ್ರಿಲ್ 2022 ರಂದು 19 ವರ್ಷ ಮೀರಿರದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

02-06-2022 Uv Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in



# ಪೇರಲ ಬೆಳೆ ನಿರ್ವಹಣೆ

■ ಶ್ರೀನಾಥ ಮರಕುಂಬಿ

ಪೇರಲ ಅಥವಾ ಸೀಬೆ ಬೆಳೆ ರೈತರಿಗೆ ಲಾಭದಾಯಕವಾಗಿದೆ. ಪೋಷಕಾಂಶಗಳ ಆಗರವಾಗಿದೆ. ಈ ನಿಟ್ಟಿನಲ್ಲಿ ಸೀಬೆ ಬೆಳೆಯ ಉಪಚಾರ ಹೇಗೆ ಮಾಡಬೇಕೆನ್ನುವ ಮಾಹಿತಿ ಇಲ್ಲಿದೆ.

ಸೀಬೆ ಬೆಳೆಗೆ ಸಾಧಾರಣ ಮಣ್ಣು, ಕ್ಷಾರಯುತ ಚೌಳುಮಣ್ಣು ಸೂಕ್ತ. 4 ರಿಂದ 5 ಅಡಿ ಆಳದ ಮಣ್ಣಿಗೆ ನೀರು ಸರಿಯಾಗಿ ಬಸಿದು ಹೋಗುವಂತಿರಬೇಕು. 5 ರಿಂದ 6 ಅಡಿಯಿದ್ದರೂ ಈ ಬೆಳೆ ರಸಸಾರವಾಗಿರುತ್ತದೆ. ಹಾಗೂ ಪೇರಲ ಉಣವಲಯದ ಬೆಳೆಯಾಗಿದ್ದು, ಸಮಶೀತೋಷ್ಣ ವಲಯದಲ್ಲೂ ಬೆಳೆಯಬಹುದು. ಮಳೆಯು ಜೂನ್‌ನಿಂದ ಸೆಪ್ಟೆಂಬರ್‌ವರೆಗೂ ಹಂಚಿಕೆಯಾಗಿರಬೇಕು. ಅತಿಯಾದ ಮಳೆಗೆ ಈ ಬೆಳೆ ಸೂಕ್ತವಲ್ಲ. 5 ಡಿಗ್ರಿ ಸೆ. ಚಳಿ ಹಾಗೂ 40 ಡಿಗ್ರಿ ಸೆ. ಬೇಸಿಗೆಯನ್ನು ತಡೆದುಕೊಳ್ಳುವ ಶಕ್ತಿ ಈ ಬೆಳೆಗೆ ಇದೆ.



ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳು ಸೀಬೆ ಬೆಳೆ ನಾಟಿ ಮಾಡಲು ಸೂಕ್ತ. ಆದರೆ, ಹೆಚ್ಚು ಮಳೆ ಬೀಳುವ ದಿನಗಳನ್ನು ಬಿಟ್ಟು ಇತರೆ ದಿನಗಳಲ್ಲಿ ನಾಟಿ ಮಾಡಬೇಕು. ಸೀಬೆಯ ಎಲೆಯು ವಿಶೇ ವಾಸನೆ ಹೊಂದಿದ್ದು, ಪ್ರಾಣಿಗಳು ಇದರ ಎಲೆಯನ್ನು ತಿನ್ನುವುದಿಲ್ಲ. ವಾರ್ಷಿಕವಾಗಿ ಮೂರು ಸಲ ಹೂ ಬಿಡುತ್ತದೆ ಮತ್ತು ಜೂನ್, ಜುಲೈ, ಸೆಪ್ಟೆಂಬರ್, ಅಕ್ಟೋಬರ್, ಮಾರ್ಚ್ ಹಾಗೂ ಏಪ್ರಿಲ್ ಬೇಸಿಗೆಯಲ್ಲಿನ ಹಣ್ಣುಗಳು ಅತ್ಯಂತ ರುಚಿಕರವಾಗಿರುತ್ತವೆ.

## ವಿಧಾನ

ಇನ್ನು ಈ ಬೆಳೆಯನ್ನು ನಾಟಿಮಾಡುವ ವಿಧಾನ ತಿಳಿಯುವುದಾದರೆ, ಬಹುವಾರ್ಷಿಕ ಬೆಳೆಯಾಗಿದ್ದು, ಇದನ್ನು ಅತೀ ಸಾಂದ್ರ ಪದ್ಧತಿಯಲ್ಲಿ ನಾಟಿ ಮಾಡಬಹುದಾಗಿದೆ. 5 ಮೀ. 7.5 ★ 5 ಮೀ. ಅಥವಾ 3 ★ 2 ಮೀ. ಅಂತರದಲ್ಲಿ ನಾಟಿ ಮಾಡಬಹುದಾಗಿದೆ. ನಿರ್ಧರಿತ ಅಂತರದಲ್ಲಿ ಮೇ ತಿಂಗಳಲ್ಲಿ 2.5 ಘನ ಅಡಿ ಗುಂಡಿ ನಿರ್ಮಿಸಿ ಮಳೆಗಾಲದವರೆಗೆ ಹಾಗೇ ಬಿಟ್ಟುಬಿಡಬೇಕು. ಮುಂಗಾರು ಮಳೆ ಬಳಿಕ ಹಸಿರೆಲೆ ಗೊಬ್ಬರ, ಕೊಟ್ಟಿಗೆ ಗೊಬ್ಬರವನ್ನು ಸಮ ಪ್ರಮಾಣದಲ್ಲಿ ಹಾಕಿ ಕೆಮ್ಮಣ್ಣು ಅಥವಾ ಮೇಲ್ಮಣ್ಣನ್ನು ತರಿಸಿ ಕಸಿ ಮಾಡಿದ ಭಾಗವು ಮೇಲಿರುವಂತೆ ನಾಟಿ ಮಾಡಿ ಕೋಲನ್ನು ನೀಡಿ ನೀರುಣಿಸಿದರೆ ಸೂಕ್ತ. ಇದಕ್ಕೆ ಹನಿ ನೀರಾವರಿ ಅಳವಡಿಕೆ ಉತ್ತಮ.

## ಗೊಬ್ಬರ ಪೂರೈಕೆ

ಸೀಬೆ ಬೆಳೆಗೆ ನೀಡಬೇಕಾದ ಪೋಕಾಂಶಗಳು ಇಂತಿಷ್ಟು ಪ್ರಮಾಣದಲ್ಲಿರಬೇಕು. 1 ರಿಂದ 3 ವರ್ಷದ ಗಿಡಗಳಿಗೆ 50 ಗ್ರಾಂ ಸಾರಜನಕ, 25 ಗ್ರಾಂ ರಂಜಕ, 75 ಗ್ರಾಂ ಪೊಟ್ಯಾಷಿಯಂ, ಅಮೋನಿಯಂ ಸಲ್ಫೇಟ್ 250 ಗ್ರಾಂ, ಸೂಪರ್ ಫಾಸ್ಫೇಟ್ 150 ಗ್ರಾಂ ಹಾಗೂ ಮ್ಯೂರಿಯೇಟ್ ಆಫ್ ಪೋಟ್ಯಾ 125 ಗ್ರಾಂ ನ್ಟು ಪ್ರಮಾಣದ ಪೋಕಾಂಶಗಳನ್ನು ಒದಗಿಸಬೇಕು. 4-6 ವರ್ಷದ ಗಿಡಗಳಿಗೆ 100 ಗ್ರಾಂ ಸಾರಜನಕ, 40 ಗ್ರಾಂ ರಂಜಕ, 75 ಗ್ರಾಂ ಪೊಟ್ಯಾಷಿಯಂ, ಅಮೋನಿಯಂ ಸಲ್ಫೇಟ್ 500 ಗ್ರಾಂ, ಸೂಪರ್ ಫಾಸ್ಫೇಟ್ 250 ಗ್ರಾಂ ಹಾಗೂ ಮ್ಯೂರಿಯೇಟ್ ಆಫ್ ಪೋಟ್ಯಾ 250 ಗ್ರಾಂ ನ್ಟು ಪ್ರಮಾಣದ ಪೋಕಾಂಶಗಳನ್ನು ಒದಗಿಸಬೇಕು. 7-10 ವರ್ಷದ ಗಿಡಗಳಿಗೆ 200 ಗ್ರಾಂ ಸಾರಜನಕ, 80 ಗ್ರಾಂ ರಂಜಕ, 150 ಗ್ರಾಂ ಪೊಟ್ಯಾಷಿಯಂ, ಅಮೋನಿಯಂ ಸಲ್ಫೇಟ್ 1000 ಗ್ರಾಂ, ಸೂಪರ್ ಫಾಸ್ಫೇಟ್ 500 ಗ್ರಾಂ ಹಾಗೂ ಮ್ಯೂರಿಯೇಟ್ ಆಫ್ ಪೋಟ್ಯಾ 500 ಗ್ರಾಂ ನ್ಟು ಪ್ರಮಾಣದ ಪೋಕಾಂಶಗಳನ್ನು ಒದಗಿಸಬೇಕು.

11 ಮತ್ತು ನಂತರದ ವರ್ಷದ ಗಿಡಗಳಿಗೆ 300 ಗ್ರಾಂ ಸಾರಜನಕ, 120 ಗ್ರಾಂ ರಂಜಕ, 150 ಗ್ರಾಂ ಪೊಟ್ಯಾಷಿಯಂ, ಅಮೋನಿಯಂ ಸಲ್ಫೇಟ್ 1500 ಗ್ರಾಂ, ಸೂಪರ್ ಫಾಸ್ಫೇಟ್ 750 ಗ್ರಾಂ ಹಾಗೂ ಮ್ಯೂರಿಯೇಟ್ ಆಫ್ ಪೋಟ್ಯಾ 500 ಗ್ರಾಂ ನ್ಟು ಪ್ರಮಾಣದ ಪೋಕಾಂಶಗಳನ್ನು ಒದಗಿಸಬೇಕು.

ಗೊಬ್ಬರವನ್ನು ಕಾಟಾಚಾರಕ್ಕೆ ಮಣ್ಣಿನ ಮೇಲ್ಪೈಗೆ ಹಾಕಿದರೆ ಪ್ರಯೋಜನವಾಗುವುದಿಲ್ಲ. ಬಹುತೇಕ ಬೇರು ಸಮೂಹ ಮಣ್ಣಿನ 10-15 ಸೆ.ಮೀ ಮೇಲ್ಪದರದಲ್ಲಿ ಹರಡಿರುತ್ತದೆ. ಗಿಡಗಳು ಬೆಳೆದಂತೆ ಅವುಗಳ ಬೇರಿನ ಬೆಳವಣಿಗೆಯಾಗುತ್ತದೆ. ಹಾಗೆಯೇ ದೂರ ದೂರದಲ್ಲಿ ಹಬ್ಬುತ್ತವೆ. ಅವುಗಳನ್ನು ಪಾತಿಗಳ ಅಗಲಕ್ಕೆ ಎರಚುವುದರ ಬದಲು ಬುಡದಿಂದ 1 ಮೀ. ದೂರದಲ್ಲಿ 15 ಸೆಂ.ಮೀ. ಅಗಲ ಮತ್ತು ಆಳದಲ್ಲಿಯೂ 15 ಸೆಂ.ಮೀ ಇರುವಂತೆ ಉಂಗುರಾಕಾರದ ತೆಗ್ಗು ತೋಡಿ ಅದರಲ್ಲಿ ಸಮನಾಗಿ ಹರಡಿ, ಮಣ್ಣಿನಲ್ಲಿ ಬೆರೆಸಬೇಕು. ಕಾಲಕಾಲಕ್ಕೆ ಗೊಬ್ಬರವನ್ನು ಹಾಕುವಾಗ ಮಣ್ಣು ಹಸಿಯಾಗಿರಬೇಕು. ಮತ್ತು ಕರಗುವ ರಸಗೊಬ್ಬರಗಳನ್ನು ನೀರಿನೊಂದಿಗೆ ಕೊಡಬಹುದು.

ಶೇ.0.3 ಯೂರಿಯಾ, 0.1 ಕ್ಯಾಲ್ಸಿಯಂ ಫಾಸ್ಫೇಟ್ ಮತ್ತು 0.1 ಮ್ಯೂರಿಯೇಟ್ ಆಫ್ ಪೋಟ್ಯಾಷ್‌ಗಳನ್ನು ದ್ರಾವಣ ರೂಪದಲ್ಲಿ ಎಲೆಗಳಿಗೆ ಸಿಂಪಡಿಸಿದಾಗ ಹೆಚ್ಚಿನ ಫಸಲು ಬರಬಹುದು. ಸತುವಿನ ನ್ಯೂನ್ಯತೆ ಸಮಸ್ಯೆಯನ್ನು ಹೋಗಲಾಡಿಸಲು 450 ಗ್ರಾಂ ಸತುವಿನ ಸಲ್ಫೇಟ್ ಮತ್ತು 340 ಗ್ರಾಂ ಸುಣ್ಣವನ್ನು 72 ಲೀ. ನೀರಿನೊಳಗೆ ಮಿಶ್ರಣ ಮಾಡಿ ಎಲೆಗಳ ಮೇಲೆ ಸಿಂಪಡಿಸಬೇಕು.

ಸೀಬೆ ಗಿಡಗಳು ತಮ್ಮಷ್ಟಕ್ಕೆ ಬೆಳೆದರೆ ಧೃಢವಾದ ಕಾಂಡ ಮತ್ತು ಬಲ್ಲಿ ಚೌಕಟ್ಟನ್ನು ಹೊಂದಲು ಸಾಧ್ಯವಾಗುವುದಿಲ್ಲ. ಅವುಗಳು ಪೊದೆಯಂತೆ ಬೆಳೆದುಬಿಡುತ್ತವೆ. ಆದ್ದರಿಂದ ಗಿಡಗಳಿಗೆ ಸೂಕ್ತವಾಗಿ ಸವರುವಿಕೆ ಮತ್ತು ಸಮತೋಲನ ಚೌಕಟ್ಟನ್ನು ನೀಡಬೇಕು.

ಎಲೆಗಳು ಉದುರಿ ವಿಶ್ರಾಂತಿಯಲ್ಲಿರುವ ಗಿಡಮರಗಳು ನೆಟ್ಟಗೆ ಬೆಳೆಯುವ ರೆಂಬೆಯನ್ನು ಕಮಾನು ಅಥವಾ ಬಿಲ್ಲಿನಂತೆ ಬಗ್ಗಿಸಿ ಕಟ್ಟುವುದು ರೂಢಿ. ಪಾತಿಗಳನ್ನು ಸರಿಪಡಿಸಿ ಹಗುರವಾಗಿ ಅಗತೆಮಡಿ, ಗೊಬ್ಬರ ಕೊಟ್ಟು ನೀರಾಯಿಸಿದರೆ ರೆಂಬೆಗಳು ಉದ್ದಕ್ಕೆ, ಮೊಗ್ಗುಗಳು, ಚಿಗುರು ತಳ್ಳಿ ಹೂ ಬಿಡುತ್ತವೆ. ಹಾಗೆಯೇ ಸೀಬೆ ಬೆಳೆಯ ಫಸಲು ಆಯಾ ಪ್ರದೇಶದ ಋತುಮಾನದ ಅನುಗುಣವಾಗಿ ಬರುತ್ತದೆ. ಅದನ್ನು ಋತೋಪಚಾರ ಎನ್ನುವರು.

> “ಸೀಬೆ ಬೆಳೆಯ ಉಪಚಾರ ಮಾಡುವುದರ ಮಾಹಿತಿಯನ್ನು ಬೆಳೆಗಾರರು ಇಲಾಖೆಯಿಂದ ತಿಳಿಯಬಹುದು. ಬೆಳೆಯ ನಿರ್ವಹಣೆಗೆ ಸಲಹೆ ಮತ್ತು ಸಹಾಯಕ್ಕೆ ಇಲಾಖೆ ಸಿದ್ದ ಮತ್ತು ಈ ಬೆಳೆಯಲ್ಲಿ ಕಡಿಮೆ ವೆಚ್ಚದಿಂದ ಅಧಿಕ ಲಾಭವನ್ನು ಕೂಡ ಪಡೆಯಬಹುದು.
>
> ■ ಕೃಷ್ಣ ಉಕ್ಕುಂದ್
> ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ(ಜಿ.ಪಂ), ಕೊಪ್ಪಳ

01-06-2022
Sk Pg 08